

بِسْمِ اللّٰہِ الرَّحْمٰنِ الرَّحِیم

# ತಹ್‌ರೀಕ್ ಜದೀದ್: 86ನೇ ವರ್ಷದ ಆರಂಭ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫತೂಹ್'** ಮಸೀದಿಯಲ್ಲಿ 08–11–2019 ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ۔
أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ۔ بِسْمِ اللّٰهِ الرَّحْمٰنِ الرَّحِيْمِ۔
اَلْحَمْدُ لِلّٰهِ رَبِّ الْعَالَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ إِيَّاكَ نَعْبُدُ وَإِيَّاكَ نَسْتَعِيْنُ۔
اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّالِّيْنَ۔

*(ತಶಹ್ಹುದ್, ತಅವ್ವುದ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಈ ಕೆಳಗಿನ ಪವಿತ್ರ ಖುರ್‌ಆನ್ ವಚನ ತಿಲಾವತ್ ಮಾಡಿದರು:*

لَّيْسَ عَلَيْكَ هُدَاهُمْ وَلٰكِنَّ اللّٰهَ يَهْدِي مَن يَشَاءُ ۗ وَمَا تُنفِقُوا مِنْ
خَيْرٍ فَلِأَنفُسِكُمْ ۚ وَمَا تُنفِقُونَ إِلَّا ابْتِغَاءَ وَجْهِ اللّٰهِ ۚ وَمَا تُنفِقُوا مِنْ
خَيْرٍ يُوَفَّ إِلَيْكُمْ وَأَنتُمْ لَا تُظْلَمُونَ

**ಲೈಸ ಅಲೈಕ ಹುದಾಹುಮ್ ವಲಾಕಿನ್ನಲ್ಲಾಹ ಯಹ್‌ದೀ ಮನ್‌ಯಶಾಅ್. ವಮಾ ತುನ್‌ಫಿಖೂ ಮಿನ್ ಖೈರಿನ್ ಫಲಿಅನ್‌ಫುಸಿಕುಮ್. ವಮಾ ತುನ್‌ಫಿಖೂನ ಇಲ್ಲಬ್‌ತಿಗಾಅ ವಜ್‌ಹಿಲ್ಲಾಹ್. ವಮಾ ತುನ್‌ಫಿಖೂ ಮಿನ್‌ಖೈರಿನ್ ಯುವಫ್ಫ ಇಲೈಕುಮ್ ವ ಅನ್‌ತುಮ್ ಲಾ ತುಝ್‌ಲಮೂನ್.**

ಅವರು ಸತ್ಪಥವನ್ನು ಅನುಸರಿಸುವಂತೆ ಮಾಡುವುದು ನಿನ್ನ ಹೊಣೆಗಾರಿಕೆಯಲ್ಲ. ಆದರೆ ಅಲ್ಲಾಹನು ತಾನಿಚ್ಛಿಸುವವರನ್ನು ಸತ್ಪಥದಲ್ಲಿ ನಡೆಸುತ್ತಾನೆ. (ಅಲ್ಲಾಹನ ಮಾರ್ಗದಲ್ಲಿ) ನೀವು ವೆಚ್ಚಮಾಡುವ ಉತ್ತಮ ಸಂಪತ್ತಿನ ಪ್ರತಿಫಲ ನಿಮಗೆಯೇ – ಅಲ್ಲಾಹನ ಸಂತೃಪ್ತಿಗೋಸ್ಕರ ಹೊರತು ನೀವು ವ್ಯವಯಿಸುವುದಿಲ್ಲವಷ್ಟೆ. ನೀವು ಖರ್ಚು ಮಾಡಿದ ಉತ್ತಮ ಸಂಪತ್ತನ್ನು ನಿಮಗೆ ಪೂರ್ಣವಾಗಿ ಮರಳಿಸಲಾಗುವುದು. ನಿಮಗೆ ಅನ್ಯಾಯವಾಗಲಾರದು. (ಪವಿತ್ರ ಖುರ್‌ಆನ್ 2:273).

ಪವಿತ್ರ ಖುರ್‌ಆನಿನ ಈ ವಚನದಿಂದ ಸ್ಪಷ್ಟವಾಗಿ ತಿಳಿಯುವುದೇನೆಂದರೆ, ನಾವು ಯಾರಿಗಾದರೂ ಒಳಿತಿನ ಮಾರ್ಗವನ್ನು ತೋರಿಸಿ ಕೊಡಬಲ್ಲೆವು. ಆದರೆ ನಾವು ಆ ವ್ಯಕ್ತಿಯನ್ನು ಒಳಿತಿನ ಮಾರ್ಗದಲ್ಲಿ ಸಂಚರಿಸುವಂತೆ ಮಾಡುವುದು ನಮಗೆ ಸಾಧ್ಯವಿಲ್ಲ. ಹಾಗೆ ಮಾಡುವ ಹೊಣೆಗಾರಿಕೆಯನ್ನು ಅಲ್ಲಾಹನು ವಹಿಸಿಕೊಂಡಿದ್ದಾನೆ. ಯಾವ ಮನುಷ್ಯನು ಅಲ್ಲಾಹನ ಕಡೆಗೆ ಸಾಗಲು ಪ್ರಯತ್ನಿಸುತ್ತಾನೋ ಮತ್ತು ಪ್ರಾರ್ಥನೆ ಸಹ ಮಾಡುತ್ತಾನೋ ಅವನು ಅಲ್ಲಾಹನ ಅನುಗ್ರಹದಿಂದ ತನ್ನ ಉದ್ದೇಶಿತ ತಾಣವನ್ನು ತಲಪುತ್ತಾನೆ. ಆದುದರಿಂದ ಆವಶ್ಯಕವಾದುದೇನೆಂದರೆ ನಾವು ಮಾರ್ಗದರ್ಶನ ಗಳಿಸಿದ ನಂತರ ಅಲ್ಲಾಹನೊಂದಿಗೆ ಪ್ರಾರ್ಥಿಸುತ್ತಾ ಇರಬೇಕು ಮತ್ತು ಅವನ ಅನುಗ್ರಹವನ್ನು ಬೇಡಿಕೊಳ್ಳುತ್ತಾ ಇರಬೇಕು. ಹಾಗೆ ಮಾಡಿದರೆ ನಮ್ಮ ಅಂತಿಮಗತಿ ಉತ್ತಮವಾಗುವುದು.

ಪವಿತ್ರ ಖುರ್‌ಆನಿನ ಈ ವಚನದಲ್ಲಿ ಅಲ್ಲಾಹನು ಪ್ರಸ್ತಾಪಿಸಿದ ಇನ್ನೊಂದು ವಿಷಯವೆಂದರೆ, ನೀವು ನಿಮ್ಮ ಉತ್ತಮ ಸಂಪತ್ತಿನಿಂದ ಧಾರ್ಮಿಕ ಕಾರ್ಯಗಳಿಗೆ ಖರ್ಚು ಮಾಡುವುದು ನಿಮ್ಮ ಲಾಭಕ್ಕೋಸ್ಕರವೇ ಆಗಿದೆ. ಅಲ್ಲಾಹನ ಮಾರ್ಗದಲ್ಲಿ ಉತ್ತಮ ಸಂಕಲ್ಪದಿಂದ ಖರ್ಚು ಮಾಡುವುದಾದರೆ ಅದು ಸಾವಿರಾರು ಪಟ್ಟು ವರ್ಧಿಸಿ ಮರಳಿ ಲಭಿಸಲು ಸಾಧ್ಯವಿದೆ ಮತ್ತು ಹಾಗೆ ಲಭಿಸುತ್ತಲೂ ಇದೆ. ಅಹ್ಮದಿಯರು ನನಗೆ ಬರೆಯುತ್ತಾ ಇರುತ್ತಾರೆ: ನಾವು ಅಲ್ಲಾಹನ ಮಾರ್ಗದಲ್ಲಿ ಹೇಗೆ ಸಾಂಪತ್ತಿಕ ತ್ಯಾಗಗಳನ್ನು ಮಾಡಿದೆವು ಮತ್ತು ಅಲ್ಲಾಹನು ಹೇಗೆ ನಮಗೆ ಅವುಗಳನ್ನು ವರ್ಧಿಸಿ ನೀಡಿದನೆಂದು. ಅಲ್ಲಾಹನು ಹೇಳುತ್ತಾನೆ, ನಾನು ಸಾಲವನ್ನು ಬಾಕಿಯಾಗಿ ಇರಿಸುವುದಿಲ್ಲ. ನೀವು ನನ್ನ ಗಮನ ಹರಿಯಿಸಲು ನಿಮ್ಮ ಪರಿಶುದ್ಧ ಸಂಪತ್ತಿನಿಂದ ನನ್ನ ಧರ್ಮದ ಹಿತಕ್ಕೋಸ್ಕರ ನಾನು ಹೇಳಿದ ಪ್ರಕಾರ ಖರ್ಚು ಮಾಡುವುದಾದರೆ ನಾನು ಸಹ ಅದನ್ನು ಮರಳಿ ನೀಡುವೆನು. ಆದರೆ ಶರತ್ತೇನೆಂದರೆ ಸಂಪತ್ತು ಪರಿಶುದ್ಧವಾಗಿರಬೇಕು.

ಅಲ್ಲಾಹನ ಅನುಗ್ರಹ ಗಳಿಸಿದ, ಅಲ್ಲಾಹನು ಹೇಳಿದ ಈ ಮಾತನ್ನು ಅನುಭವದಿಂದ ಕಂಡು ಅದರ ಬಗ್ಗೆ ಜ್ಞಾನ ಗಳಿಸಿದ ಸಾವಿರಾರು, ಅಲ್ಲ ಲಕ್ಷಗಟ್ಟಲೆ ಅಹ್ಮದಿಯರಿದ್ದಾರೆ. ಅಂತಹ ಕೆಲವು ಉದಾಹರಣೆಗಳನ್ನು ನಿಮ್ಮ ಮುಂದೆ ಇರಿಸುತ್ತೇನೆ. ನಾವು ಬಲಿದಾನದ ಈ ದೃಶ್ಯಗಳನ್ನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಕಾಲದಿಂದ ಮೊದಲುಗೊಂಡು ಕಾಣುತ್ತಾ ಇದ್ದೇವೆ. ಸೀರಾಲಿಯೋನ್ ದೇಶದ ಒಬ್ಬ ಮುಬಲ್ಲಿಗ್ ಬರೆಯುತ್ತಾರೆ: ಲೋನ್‌ಸೂ ರೀಜನ್ ಪ್ರದೇಶದಲ್ಲಿ ಒಬ್ಬ ನವ ಅಹ್ಮದಿ ಕುಮಾರಾ ಸಾಹಿಬರಿಗೆ ತಹ್‌ರೀಕ್ ಜದೀದ್ ಚಂದದ ಬಗ್ಗೆ ಮತ್ತು ಅದರ ಅನುಗ್ರಹಗಳ ಬಗ್ಗೆ ತಿಳಿಸಲಾಯಿತು. ಈ ಹೊಸದಾಗಿ ಬೈಅತ್ ಮಾಡಿದ ಅಹ್ಮದಿ ಆಮ್ ಚಂದದ ಜೊತೆಗೆ ತಹ್‌ರೀಕ್ ಜದೀದ್ ಚಂದ ಸಹ ಪಾವತಿ ಮಾಡಿದರು. ಅವರ ಬಳಿ ಇದ್ದ ಸ್ವಲ್ಪ ಹಣದಿಂದ ಅವರು ಮನೆಗೆ ಅಕ್ಕಿ ಖರೀದಿಸಲು ಇಚ್ಛಿಸುತ್ತಿದ್ದರೂ ಅವರು ಆ ಹಣವನ್ನು ಸಹ ತಹ್‌ರೀಕ್ ಚಂದವಾಗಿ ಕೊಟ್ಟರು. ಮುಬಲ್ಲಿಗ್ ಸಾಹಿಬ್ ಹೇಳುತ್ತಾರೆ: ಆ ನವ ಅಹ್ಮದಿ ಕೆಲವು ದಿನಗಳ ನಂತರ ಬಂದು ಹೇಳಿದರು: ನಾನು ತಹ್‌ರೀಕ್ ಜದೀದ್ ಚಂದವನ್ನು ನೀಡಿದ ಮರುದಿನ ನಾನು ಕೆಲಸ ಮಾಡುವ ಕಂಪೆನಿಯವರು ಹೇಳಿದರು: ನಾನು ನಿಮ್ಮ ವಿಭಾಗವನ್ನು ಬದಲಾಯಿಸಿದ್ದೇವೆ. ಹೊಸ ವಿಭಾಗದಲ್ಲಿ ಸಂಬಳ ದುಪ್ಪಟ್ಟು ಇದೆ ಮತ್ತು ಇತರ ಸೌಲಭ್ಯಗಳೂ ಹೆಚ್ಚಿಗೆ ಇವೆ. ಅವರು ಹೇಳುತ್ತಾರೆ: ನಾನು ಯಾವ ಅನುಗ್ರಹಗಳ ಬಗ್ಗೆ ಆಲಿಸಿದ್ದೇನೋ ಆ ಅನುಗ್ರಹಗಳ ಮಿಣುಕು ನೋಟವನ್ನು ಅಲ್ಲಾಹನು ನನಗೆ ತೋರಿಸಿದನು. ನಾನು ಇನ್ನು ಮುಂದೆ ಪ್ರತಿ ತಿಂಗಳು ಚಂದ ಅಮ್ ಜೊತೆಗೆ ತಹ್‌ರೀಕ್ ಜದೀದ್ ಚಂದ ಸಹ ಕೊಡುವೆನು.

ಸೀರಾಲಿಯೋನಿನ ಪೋರ್ಟ್‌ಲೋಕೋ ರೀಜನ್ ಮುಬಲ್ಲಿಗ್ ಹೇಳುತ್ತಾರೆ: ಒಂದು ಗ್ರಾಮದ ನಿವಾಸಿ

ಮುಹಮ್ಮದ್ ಸಾಹಿಬ್ ಎಂಬ ಅಹ್ಮದಿಗೆ ತಹ್‌ರೀಕ್ ಜದೀದ್ ಚಂದ ವಾಗ್ದಾನ ಪ್ರಕಾರ ನೀಡಲಾಗಲಿಲ್ಲ. ವರ್ಷಾಂತ್ಯದಲ್ಲಿ ಅವರು ಹೇಳಿದರು: ನನ್ನ ಬಳಿ ಸ್ವಲ್ಪ ಅಕ್ಕಿ ಮಾತ್ರ ಇದೆ ಬೇರೇನೂ ಇಲ್ಲ. ಅವರು ಆ ಅಕ್ಕಿಯನ್ನು ಮಾರಿದರು ಮತ್ತು ತನ್ನ ವಾಗ್ದಾನ ಈಡೇರಿಸಿದರು. ಅವರು ಹೇಳುತ್ತಾರೆ, ಮರುದಿನ ನನ್ನ ದೂರದ ಒಬ್ಬ ಸಂಬಂಧಿಕ ಒಂದು ಗೋಣಿ ಚೀಲ ಅಕ್ಕಿ ಮತ್ತು ಸ್ವಲ್ಪ ಹಣವನ್ನು ನನಗೆ ಪಾರಿತೋಷಿಕವಾಗಿ ಕಳುಹಿಸಿಕೊಟ್ಟರು. ನನ್ನ ಈಮಾನ್ ಬಹಳ ಬಲಿಷ್ಠವಾಯಿತು. ನಾನು ಕೆಲವು ಕಪ್‌ಗಳ ಅಳತೆಯ ಅಕ್ಕಿಯನ್ನು ಅಲ್ಲಾಹನ ಮಾರ್ಗದಲ್ಲಿ ನೀಡಿದೆ. ಅಲ್ಲಾಹನು ಅದಕ್ಕೆ ಪ್ರತಿಫಲವಾಗಿ ನೂರು ಕಿಲೋ ಅಕ್ಕಿಯನ್ನು ಮತ್ತು ಸ್ವಲ್ಪ ಹಣವನ್ನು ಸಹ ನನಗೆ ಕೊಟ್ಟನು.

ಯು.ಕೆ.ಯಲ್ಲಿರುವ ಒಬ್ಬ ಮಹಿಳೆಯೊಂದಿಗೆ ಅಲ್ಲಾಹನು ಹೇಗೆ ವರ್ತಿಸಿದನು. ಅವರ ಈಮಾನ್ ಹೇಗೆ ವರ್ಧಿಸಿತು ಎಂಬುದರ ಬಗ್ಗೆ ಅವರು ಹೇಳುತ್ತಾರೆ: ನಾನು ತಹ್‌ರೀಕ್ ಜದೀದ್ ಚಂದ ಪಾವತಿ ಮಾಡಿದ್ದೆನು. ಸ್ಥಳೀಯ ಲಜ್‌ನದ ಸದರ್ ಸಾಹಿಬರ ಸಂದೇಶ ದೊರಕಿತು. ನಮ್ಮ ಚಂದದ ಟಾರ್ಗೆಟ್ ಪೂರ್ಣಗೊಳ್ಳಲು ಇನ್ನಷ್ಟು ಹಣ ಬೇಕಾಗಿದೆ ಎಂದು. ಆಗ ನಾನು ನನ್ನ ಬಳಿ ಇದ್ದ ಎಲ್ಲ ಹಣವನ್ನು ಚಂದವಾಗಿ ನೀಡಿದೆನು. ಮರುದಿನ ನಾನು ನನ್ನ ಬ್ಯಾಂಕ್ ಅಕೌಂಟ್ ನೋಡಿದಾಗ ನಾನು ಆಶ್ಚರ್ಯಗೊಂಡೆ, ನಾನು ಚಂದವಾಗಿ ನೀಡಿದ ಹಣದ ನಾಲ್ಕು ಪಟ್ಟು ಹಣ ಬ್ಯಾಂಕ್‌ನಿಂದ ನನ್ನ ಅಕೌಂಟಿಗೆ ಜಮಾಯಿಸಲಾಗಿತ್ತು. ನನಗೆ ಅದರ ಬಗ್ಗೆ ಯಾವ ಪ್ರತೀಕ್ಷೆಯೂ ಇರಲಿಲ್ಲ. ಬುರ್ಕಿನೋಫಾಸೋ ದೇಶದ ಅಮೀರ್ ಸಾಹಿಬ್ ಬರೆಯುತ್ತಾರೆ: ಕೋಲೋ ಎಂಬ ಸ್ಥಳದಲ್ಲಿ ಸಾವಾಡೂ ಸಾಹಿಬ್ ತಹ್‌ರೀಕ್ ಜದೀದ್ ಚಂದವಾಗಿ ಪ್ರತಿ ತಿಂಗಳು ನೂರು ಫ್ರಾಂಕ್ ನೀಡುತ್ತಿದ್ದರು. ಒಮ್ಮೆ ಅವರಿಗೆ ಒಬ್ಬರು ಮೂರು ಆಡುಗಳನ್ನು ಪಾರಿತೋಷಿಕವಾಗಿ ಕೊಟ್ಟಾಗ ಅದರಲ್ಲಿ ಒಂದು ಆಡನ್ನು ತಹ್‌ರೀಕ್ ಜದೀದ್ ಚಂದವಾಗಿ ಕೊಟ್ಟು ಎರಡು ಆಡುಗಳನ್ನು ತನ್ನ ಬಳಿ ಇರಿಸಿದರು. ಅಲ್ಲಾಹನು ಅವರಿಗೆ ಹೇಗೆ ಅನುಗ್ರಹಿಸಿದನೆಂದರೆ ಅವರು ಈಗ ಅನೇಕ ಜಾನುವಾರುಗಳ ಮಾಲಿಕರಾಗಿದ್ದಾರೆ. ಈಗ ಅವರು ಪ್ರತಿ ತಿಂಗಳು ಒಂದು ನೂರಕ್ಕೆ ಬದಲಾಗಿ ಒಂದು ಸಾವಿರ ಫ್ರಾಂಕ್ ಚಂದವಾಗಿ ಕೊಡುತ್ತಿದ್ದಾರೆ.

ಭಾರತದ ಕರ್ನಾಟಕ ರಾಜ್ಯದಿಂದ ತಹ್‌ರೀಕ್ ಜದೀದ್ ಇನ್ಸ್‌ಪೆಕ್ಟರ್ ಇಬ್ರಾಹೀಮ್ ಸಾಹಿಬ್ ಬರೆಯುತ್ತಾರೆ: ಗುಲ್ಬರ್ಗದ ಒಬ್ಬ ತರುಣನಿಗೆ ಬೆಂಗಳೂರಿನಲ್ಲಿ ಒಂದು ಕಂಪೆನಿಯಲ್ಲಿ ಇಪ್ಪತ್ತು ಸಾವಿರ ರೂಪಾಯಿ ಮಾಸಿಕ ಸಂಬಳದ ಉದ್ಯೋಗ ಲಭಿಸಿತು. ಇನ್ಸ್‌ಪೆಕ್ಟರ್ ಹೇಳುತ್ತಾರೆ: ಹಝ್ರತ್ ಮುಸ್ಲಿಹ್ ಮೌಊದ್ ರಳಿಯಲ್ಲಾಹು ಅನ್‌ಹು ಪ್ರಸ್ತಾಪಿಸಿದ ಉನ್ನತ ಮಟ್ಟದ ತ್ಯಾಗದ ಬಗ್ಗೆ ವಿವರಿಸಿ ಅವರ ಸಂಬಳದ ಅರ್ಧಾಂಶ ತಹ್‌ರೀಕ್ ಜದೀದ್ ಚಂದವಾಗಿ ನೀಡಲು ಪ್ರೇರೇಪಿಸಲಾಯಿತು. ಅವರ ಕುಟುಂಬದ ಸ್ಥಿತಿ ಅಷ್ಟೇನೂ ಚೆನ್ನಾಗಿರದಿದ್ದರೂ ಅವರು ಹತ್ತು ಸಾವಿರ ರೂಪಾಯಿಗಳನ್ನು ಚಂದವಾಗಿ ನೀಡುವ ವಾಗ್ದಾನ ಮಾಡಿದರು. ಅವರ ಸಂಬಂಧಿಕರು ಹೇಳಿದರು: ನಿನಗೆ ಈಗ ತಾನೆ ಹೊಸ ಉದ್ಯೋಗ ಲಭಿಸಿದೆ ಇಷ್ಟು ದೊಡ್ಡ ಸಂಖ್ಯೆಯ ಹಣದ ವಾಗ್ದಾನ ಮಾಡಿದರೆ ಕಷ್ಟವಾಗಬಹುದು. ಆಗ ಆ ತರುಣ ಹೇಳಿದರು: ಹಝ್ರತ್ ಮುಸ್ಲಿಹ್ ಮೌಊದ್ ರಳಿಯಲ್ಲಾಹು ಅನ್‌ಹು ಹೇಳಿದ್ದಾರೆ, ಮನುಷ್ಯನು ಸಂಪೂರ್ಣವಾಗಿ ಪ್ರಯತ್ನವನ್ನು ಮಾಡದಿದ್ದರೆ ಅಲ್ಲಾಹನ ದೇವದೂತರು ಅವನಲ್ಲಿ ಶಕ್ತಿಯನ್ನು ಸೃಷ್ಟಿಸುವುದಿಲ್ಲ. ಆದುದರಿಂದ ನಾನು ವಾಗ್ದಾನ ಪ್ರಕಾರ ಚಂದ ನೀಡುವೆನು ಎಂದು ಹೇಳಿದರು. ಇನ್ಸ್‌ಪೆಕ್ಟರ್ ಹೇಳುತ್ತಾರೆ: ಅನಂತರ ಕೆಲವು ದಿನಗಳೊಳಗೆ ಆ ಯುವಕನಿಗೆ ಬೇರೆ ಒಂದು ಕಂಪೆನಿಯಲ್ಲಿ ಉದ್ಯೋಗ ಲಭಿಸಿತು. ಅಲ್ಲಿ ಆ ಯುವಕನಿಗೆ ಪ್ರತಿ ತಿಂಗಳು ಒಂದು ಲಕ್ಷದ ಇಪ್ಪತ್ತೇಳು ಸಾವಿರ ರೂಪಾಯಿ ಸಂಬಳ ದೊರಕುತ್ತಿದೆ. ಆ ಯುವಕ ಹೇಳುತ್ತಾರೆ: ಇದು ಚಂದದ ಅನುಗ್ರಹದಿಂದ ದೊರೆತುದಾಗಿದೆ.

ಕೇರಳದ ಇನ್ಸ್‌ಪೆಕ್ಟರ್ ತಹ್‌ರೀಕ್ ಜದೀದ್ ಬರೆಯುತ್ತಾರೆ: ಕರುಳಾಯಿ ಜಮಾಅತಿನ ಒಬ್ಬ ನಿಷ್ಠಾವಂತ ಅಹ್ಮದಿ ತಹ್‌ರೀಕ್ ಜದೀದ್‌ಗೆ ಆರ್ಥಿಕ ಬಲಿದಾನ ನೀಡುವವರಲ್ಲಿ ವೈಶಿಷ್ಟ್ಯಪೂರ್ಣರಾಗಿದ್ದಾರೆ. ಅವರು ತಹ್‌ರೀಕ್ ಜದೀದ್ ಚಂದವಾಗಿ ಹದಿನೈದು ಲಕ್ಷ ರೂಪಾಯಿಗಳನ್ನು ಬರೆಯಿಸಿದರು. ಆದರೆ ಅವರಿಗೆ ಕೇವಲ ಎರಡು ಲಕ್ಷ ಪಾವತಿಸಲು ಸಾಧ್ಯವಾಯಿತು. ವರ್ಷಾಂತ್ಯ ಸಮೀಪಿಸುತ್ತಿತ್ತು. ಚಂದ ಪೂರ್ಣವಾಗಿ ಹೇಗೆ ಪಾವತಿಸುವುದು ಎಂಬ ಚಿಂತೆಯಲ್ಲಿದ್ದರು. ನನಗೆ ಸಹ ಪತ್ರ ಬರೆಯುತ್ತಾ ಇದ್ದರು. ವರ್ಷದ ಕೊನೆಯ ಭಾಗದಲ್ಲಿ ಪತ್ರ ಬರೆದರು, ವರ್ಷಾಂತ್ಯವಾಗಲಿದೆ ಅಲ್ಲಾಹನ ಅನುಗ್ರಹದಿಂದ ವಾಗ್ದಾನ ಈಡೇರಿಸುವಂತಾಗಲಿ ಎಂದು ಪ್ರಾರ್ಥಿಸಿರಿ. ಅವರು ಹೇಳುತ್ತಾರೆ: ವರ್ಷಾಂತ್ಯಗೊಳ್ಳಲು ಕೆಲವು ಗಂಟೆಗಳಿರುವಾಗ ಒಂದು ದೊಡ್ಡ ಸಂಖ್ಯೆಯ ಹಣ ಅವರ ಅಕೌಂಟ್‌ನಲ್ಲಿ ಜಮೆಯಾಯಿತು. ಅದರಿಂದ ಅವರು ಚಂದದ ವಾಗ್ದಾನವನ್ನು ಪೂರ್ಣಗೊಳಿಸಿದರು ಮಾತ್ರವಲ್ಲ ಒಂದು ದೊಡ್ಡ ಸಂಖ್ಯೆಯ ಹಣ ಹೆಚ್ಚುವರಿಯಾಗಿ ನೀಡಿದರು.

ಬೆನಿನ್ ದೇಶದ ನಾತಿ ರೀಜನಿನ ಮುಅಲ್ಲಿಮ್ ಬರೆಯುತ್ತಾರೆ: ಕತಮ್ ಪೋತಿ ಜಮಾಅತಿನ ಒಬ್ಬ ಅಹ್ಮದಿಯೊಂದಿಗೆ ತಹ್‌ರೀಕ್ ಜದೀದ್ ಚಂದದ ಬಗ್ಗೆ ಹೇಳಿದಾಗ ಕೂಡಲೆ ಅವರು ಮೂರು ಸಾವಿರ ಫ್ರಾಂಕ್ ಸೈಫ ಚಂದವಾಗಿ ನೀಡಿದರು. ಅವರು ಇಷ್ಟು ದೊಡ್ಡ ಸಂಖ್ಯೆಯಲ್ಲಿ ಚಂದ ನೀಡಿದ ಬಗ್ಗೆ ನಾನು ಆಶ್ಚರ್ಯಗೊಂಡೆನು. ಆಗ ಆ ವ್ಯಕ್ತಿ ಹೇಳಿದರು: ನಾನು ಚಂದದ ಬಗ್ಗೆ ಉದಾಸೀನತೆ ತೋರಿಸುವಾಗ ಕಷ್ಟಗಳು ವರ್ಧಿಸುತ್ತವೆ. ಕೃಷಿಯ ಬೆಳೆ ಸಹ ಚೆನ್ನಾಗಿರುವುದಿಲ್ಲ. ನಾನು ಕಳೆದ ಸಲ ಕೊನೆಯ ಬಾರಿ ಚಂದ ನೀಡುವಾಗ ಚಂದದಿಂದ ಹೇಗೆ ಅನುಗ್ರಹ ಲಭಿಸುತ್ತದೆಂದು ನೋಡೋಣವೆಂಬುದಾಗಿ ಯೋಚಿಸಿದೆ. ನಾನು ಅನುಭವ ಜ್ಞಾನದಿಂದ ಹೇಳುತ್ತೇನೆ, ಚಂದದ ಅನುಗ್ರಹಗಳನ್ನು ಅಲ್ಲಾಹನು ರಹಸ್ಯವಾಗಿ ಒದಗಿಸಿಕೊಡುತ್ತಾನೆ. ಅವನು ನಮ್ಮ ಆವಶ್ಯಕತೆಗಳನ್ನು ಈಡೇರಿಸಿ ಕೊಡುತ್ತಾನೆ.

ಮಾಸ್ಕೋ ನಗರದ ಮುಬಲ್ಲಿಗ್ ಸಾಹಿಬ್ ಬರೆಯುತ್ತಾರೆ: ಈಗ ಪ್ರತಿ ದೇಶದಲ್ಲಿಯೂ ಅಲ್ಲಾಹನು ಜನರಿಗೆ ಅವರು ಸಾಂಪತ್ತಿಕ ಬಲಿದಾನ ನೀಡಿದಾಗ ಅನುಗ್ರಹಗಳ ದೃಶ್ಯಗಳನ್ನು ತೋರಿಸುತ್ತಾನೆ. ಉಝ್‌ಬೆಕಿಸ್ಥಾನದ ಒಬ್ಬ ಅಹ್ಮದಿ ಝಾಯಿರ್

ಸಾಹಿಬರಿಗೆ ತಹ್‌ರೀಕ್ ಜದೀದ್ ಚಂದದ ಬಗ್ಗೆ ಗಮನ ಹರಿಸಿದಾಗ ಅವರು ಹೇಳಿದರು: ನಾನು ಉಝ್ಬೆಕಿಸ್ಥಾನದಲ್ಲಿ ಟ್ಯಾಕ್ಸಿ ಚಲಾಯಿಸುತ್ತಿದ್ದೇನೆ. ನನ್ನ ಪತ್ನಿ ಹೊಲಿಗೆ ಕೆಲಸ ಮಾಡುತ್ತಾರೆ. ನಾವಿಬ್ಬರೂ ಹೀಗೆ ನಿರ್ಧರಿಸಿದ್ದೇವೆ: ನಮ್ಮಿಬ್ಬರ ಸಂಪಾದನೆಯನ್ನು ಮೂರು ಭಾಗಗಳಾಗಿ ಮಾಡಿ ಒಂದು ಭಾಗ ಮಕ್ಕಳಿಗೋಸ್ಕರ ಇನ್ನೊಂದು ಭಾಗ ಮನೆ ಖರ್ಚಿಗೆ ಮತ್ತು ಮೂರನೆಯ ಭಾಗ ಚಂದವಾಗಿ ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡಲು ಪ್ರತ್ಯೇಕವಾಗಿರಿಸಿದ್ದೇವೆ. ಈ ರೀತಿ ಪತಿ ಪತ್ನಿಯರು ನೆಮ್ಮದಿಯಿಂದ ಜೀವಿಸುತ್ತಿದ್ದಾರೆ. ಗೃಹ ಜೀವನ ಸಹ ಸಂತೋಷಕರವಾಗಿದೆ. ಝೂಯಿರ್ ಸಾಹಿಬ್ ಹೇಳುತ್ತಾರೆ: ಅವರು ಚಂದ ನೀಡಲು ಪ್ರಾರಂಭಿಸಿದ ನಂತರ ಅಲ್ಲಾಹನು ವಿಶಿಷ್ಟವಾಗಿ ಅನುಗ್ರಹ ನೀಡುತ್ತಿದ್ದಾನೆ. ಅವರ ಆದಾಯದಲ್ಲಿ ಎಷ್ಟು ಅನುಗ್ರಹ ದೊರಕಿತೆಂದರೆ ಹಿಂದಿನ ವರ್ಷಗಳಲ್ಲಿ ಅಂತಹ ಅನುಗ್ರಹ ದೊರೆತಿರಲಿಲ್ಲ.

ಜರ್ಮನಿಯ ಜಮಾಅತಿನ ಒಬ್ಬ ಮಹಿಳೆ ಬರೆಯುತ್ತಾರೆ: ನಾನು ಎರಡು ತಿಂಗಳ ಗರ್ಭಿಣಿಯಾಗಿದ್ದಾಗ ಉಂಟಾದ ತೊಂದರೆಗಾಗಿ ಬಹಳ ಪ್ರಾರ್ಥಿಸಿದೆ. ಪ್ರತಿ ತಿಂಗಳು ಒಂದು ನೂರು ಯುರೋ ತಹ್‌ರೀಕ್ ಜದೀದ್ ಚಂದ ನೀಡುವುದಾಗಿ ವಾಗ್ದಾನ ಮಾಡಿದೆ. ಅನಂತರ ಏಳು ತಿಂಗಳು ಅಲ್ಲಾಹನ ಅನುಗ್ರಹದಿಂದ ಸುಖವಾಗಿ ಕಳೆದೆ ಮತ್ತು ಯಾವುದೇ ಸಮಸ್ಯೆ ತಲೆದೋರಲಿಲ್ಲ ಅಲ್ಲಾಹನು ತನ್ನ ಅನುಗ್ರಹದಿಂದ ಪುತ್ರನನ್ನು ದಯಪಾಲಿಸಿದನು. ನಾನು ಅಲ್ಲಾಹನೊಂದಿಗೆ ವಾಗ್ದಾನ ಮಾಡಿದ ಹಾಗೆ ಪ್ರತಿ ತಿಂಗಳು ಒಂದು ನೂರು ಯುರೋ ತಹ್‌ರೀಕ್ ಜದೀದ್ ಚಂದವಾಗಿ ನೀಡುತ್ತಿರುವೆನು. ಲೋಕದ ಈ ಭೂಭಾಗ ಭೌತಿಕತೆಯಲ್ಲಿ ಮುಳುಗಿ ಅಲ್ಲಾಹನಿಂದ ದೂರ ಸರಿದಿರುವಾಗ ಇಲ್ಲಿ ಅಲ್ಲಾಹನು ಅಹ್ಮದಿಯರಿಗೆ ಅನುಗ್ರಹ ನೀಡಿ ತನ್ನ ಅಸ್ತಿತ್ವದ ಸಾಕ್ಷ್ಯಾಧಾರ ನೀಡುತ್ತಿದ್ದಾನೆ ಮತ್ತು ಅಹ್ಮದಿಯ್ಯತ್ತಿನ ಸತ್ಯತೆ ಸಹ ಅವರಿಗೆ ಪ್ರಕಟವಾಗುತ್ತಾ ಇದೆ.

ಇಂಡೋನೇಶಿಯಾದ ಅಮೀರ್ ಸಾಹಿಬ್ ಬರೆಯುತ್ತಾರೆ: ಒಬ್ಬ ನವ ಅಹ್ಮದಿಗೆ ತಹ್‌ರೀಕ್ ಜದೀದ್ ಚಂದದ ಬಗ್ಗೆ ಹೇಳಿದಾಗ ಐದು ಲಕ್ಷ ಇಂಡೋನೇಶಿಯನ್ ರೂಪಾಯಿ ನೀಡುವುದಾಗಿ ವಾಗ್ದಾನ ಮಾಡಿದರು. ರಮಝಾನ್ ತಿಂಗಳಲ್ಲಿ ಆ ಚಂದ ನೀಡಿದರು. ಅವರು ಹೇಳಿದರು: ನನ್ನ ಒಬ್ಬ ಸಂಬಂಧಿಕ ನನಗೆ ಒಂದು ಲಕೋಟೆಯಲ್ಲಿ ಹಣವಿರಿಸಿ ಪಾರಿತೋಷಿಕವಾಗಿ ನೀಡಿದರು. ಅದರಲ್ಲಿ 5 ಲಕ್ಷ ಇಂಡೋನೇಶಿಯನ್ ರೂಪಾಯಿ ಗಳಿದ್ದುವು. ಅವರು ಅದನ್ನು ಚಂದಾ ಆಗಿ ನೀಡಿದರು.

ಮಕ್ಕಳಲ್ಲಿ ಸಹ ನಿಷ್ಠೆ ಮತ್ತು ಆರ್ಥಿಕ ಬಲಿದಾನದ ಮಹತ್ವದ ಮನೋಭಾವ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಜಮಾಅತ್‌ನಲ್ಲಿ ಕಂಡು ಬರುತ್ತದೆ. ಘಾನ ದೇಶದ ಮುಬಲ್ಲಿಗ್ ಸಾಹಿಬ್ ಬರೆಯುತ್ತಾರೆ: ಹತ್ತು ವರ್ಷ ಪ್ರಾಯದ ಒಬ್ಬ ಬಾಲಕ ಸ್ವಲ್ಪ ಹಣ ತಂದು ತಹ್‌ರೀಕ್ ಜದೀದ್ ಚಂದವಾಗಿ ನೀಡಿದನು. ಅವನೊಂದಿಗೆ ಕೇಳಿದಾಗ ಹೇಳಿದನು: ನಾನು ತಂದೆ ತಾಯಂದಿರರಿಂದ ಚಂದ ನೀಡಲು ಹಣ ಕೇಳಿದಾಗ ನನಗೆ ಯಾವುದೋ ಕಾರಣದಿಂದ ಸಿಗಲಿಲ್ಲ. ಆಗ ನಾನು ಒಂದು ಅಂಗಡಿಯಲ್ಲಿ ಕೆಲಸ ಮಾಡಿ ನನಗೆ ದೊರೆತ ಹಣವನ್ನು ಚಂದವಾಗಿ ನೀಡಿದೆ.

ಅಲ್ಲಾಹನು ಈ ಜನರ ಸಂಪತ್ತಿನಲ್ಲಿಯೂ ವಿಶ್ವಾಸದಲ್ಲಿಯೂ ಬಹಳ ಅನುಗ್ರಹ ನೀಡಲಿ. ಇಂತಹ ತ್ಯಾಗದ ಕಲ್ಪನೆ ಇಲ್ಲಿರುವ ಮಕ್ಕಳಲ್ಲಿರಲಾರದು. ಕಾರ್ಮಿಕರ ಹಾಗೆ ಕೆಲಸ ಮಾಡಿ ಚಂದ ಕೊಡುವ ಸ್ಥಿತಿ ಇಲ್ಲಿ ಇಲ್ಲ. ಇಲ್ಲಿನ ಸ್ಥಿತಿ ಉತ್ತಮವಾಗಿದೆ. ನಿಸ್ಸಂದೇಹವಾಗಿ ಇಲ್ಲಿ ಸಹ ಒಳ್ಳೆಯ ಉದಾಹರಣೆಗಳಿವೆ. ಕೆಲವು ಮಕ್ಕಳು ತಮಗೆ ಪಾಕೆಟ್ ಮನಿಯಾಗಿ ದೊರೆತ ಎಲ್ಲಾ ಹಣವನ್ನು ಚಂದವಾಗಿ ನೀಡಿದ್ದಾರೆ. ಒಟ್ಟಾರೆ ಹೇಳುವುದಾದರೆ ಪ್ರತಿಯೊಂದು ಪ್ರದೇಶದಲ್ಲಿ ನಿಷ್ಠೆಯ ಉದಾಹರಣೆಗಳು ಸಿಗುತ್ತಾ ಇವೆ. ಅಲ್ಲಾಹನು ಅವರ ನಿಷ್ಠೆಯನ್ನು ವರ್ಧಿಸುವವನಾಗಲಿ. ವರ್ಧಿಸುತ್ತಾ ಇರಲಿ.

ಇನ್ನು ಮುಂದೆ ನಾನು ಕೆಲವು ಮಾಹಿತಿಗಳನ್ನು ನೀಡುವೆನು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಜಮಾಅತಿಗೆ ಆರ್ಥಿಕ ಬಲಿದಾನ ನೀಡುವ ಭಾಗ್ಯವನ್ನು ಅಲ್ಲಾಹನು ನೀಡುತ್ತಿದ್ದಾನೆ. ಅಲ್ಲಾಹನ ಸಹಾಯವಿಲ್ಲದೆ ಈ ಬಲಿದಾನಗಳನ್ನು ಮಾಡಲು ಸಾಧ್ಯವಾಗದು. ಅಲ್ಲಾಹನೇ ಅಹ್ಮದಿಯರ ಹೃದಯಗಳಲ್ಲಿ ಬಲಿದಾನ ಮನೋಭಾವವನ್ನು ಹುಟ್ಟಿಸುತ್ತಾನೆ. ಇದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸತ್ಯತೆಗೆ ಸಾಕ್ಷ್ಯವಾಗಿದೆ.

ಅಲ್ಲಾಹನ ಅನುಗ್ರಹದಿಂದ ಅಕ್ಟೋಬರ್ ದಿನಾಂಕ 31ರಂದು ತಹ್‌ರೀಕ್ ಜದೀದಿನ 85ನೇ ವರ್ಷ ಕೊನೆಗೊಂಡಿದೆ. ಈಗ 86ನೇ ವರ್ಷ ಆರಂಭವಾಗಿದೆ. ಈ ಕಳೆದ ವರ್ಷ ತಹ್‌ರೀಕ್ ಜದೀದ್ ಚಂದವಾಗಿ 13.6 ಮಿಲಿಯನ್ ಪೌಂಡ್ ದೊರೆತಿದೆ. ಇದು ಅಲ್ಲಾಹನ ಅನುಗ್ರಹದಿಂದ ಕಳೆದ ವರ್ಷಕ್ಕಿಂತ ಎಂಟು ಲಕ್ಷದ ಎರಡು ಸಾವಿರ ಪೌಂಡ್ ಹೆಚ್ಚಿಗೆ ಇದೆ. ಒಟ್ಟಿನಲ್ಲಿ ಪ್ರಥಮ ಸ್ಥಾನ ಈ ವರ್ಷ ಜರ್ಮನಿಗೆ ದೊರೆತಿದೆ. ಪಾಕಿಸ್ಥಾನ ಎರಡನೆಯ ಸ್ಥಾನದಲ್ಲಿದೆ. ಹಿಂದೆ ಪಾಕಿಸ್ಥಾನವನ್ನು ಪತ್ಯೇಕಿಸಿಡಲಾಗುತ್ತಿತ್ತು. ಪ್ರಥಮ ಸ್ಥಾನ ಅದಕ್ಕೆ ಇತ್ತು. ಪಾಕಿಸ್ಥಾನವನ್ನು ಬಿಟ್ಟು ಇತರ ದೇಶಗಳ ವಿವರಣೆ ನೀಡಲಾಗುತ್ತಿತ್ತು. ಈಗ ಪಾಕಿಸ್ಥಾನ ಎರಡನೆಯ ಸ್ಥಾನದಲ್ಲಿದೆ. ಆದುದರಿಂದ ಅದರ ಸಹಿತ ಹತ್ತು ದೇಶಗಳ ವಿವರಣೆ ನೀಡುತ್ತೇನೆ, ಪ್ರಥಮ ಸ್ಥಾನ ಜರ್ಮನಿಗೆ ಅನಂತರ ಪಾಕಿಸ್ಥಾನ ನಂತರ ಬ್ರಿಟನ್. ಅನಂತರ ಅನುಕ್ರಮವಾಗಿ ಅಮೆರಿಕ ಕೆನಡ, ಭಾರತ, ಮಧ್ಯಪೂರ್ವದ ಒಂದು ಜಮಾಅತ್, ಇಂಡೋನೇಶಿಯಾ, ಆಸ್ಟ್ರೇಲಿಯಾ, ಘಾನ ಹಾಗೂ ಪುನಃ ಇನ್ನೊಂದು ಮಧ್ಯಪೂರ್ವ ದೇಶ.

ಆರ್ಥಿಕವಾಗಿ ಲೋಕದ ಸ್ಥಿತಿ ಹಾಳಾಗಿದ್ದರೂ ಪಾಕಿಸ್ಥಾನ ಮತ್ತು ಇತರ ದೇಶಗಳ ಆರ್ಥಿಕ ಸ್ಥಿತಿ ಕೆಟ್ಟಿದ್ದರೂ ಸ್ಥಳೀಯ ನಾಣ್ಯ ಪದ್ಧತಿಗೆ ಅನುಸಾರವಾಗಿ ಹೆಚ್ಚು ಚಂದ ವಸೂಲಾದ ದೇಶಗಳು ಹೀಗಿವೆ: ಮಧ್ಯಪೂರ್ವದ ಒಂದು ದೇಶ, ಅನಂತರ ಭಾರತ ಅಲ್ಲಿ ಶೇಕಡಾವಾರು ವಸೂಲಿಯಲ್ಲಿ ವರ್ಧನೆ ಆಗಿದೆ, ಅನಂತರ ಕೆನಡ, ಜರ್ಮನಿ, ಬ್ರಿಟನ್, ಘಾನ, ಪಾಕಿಸ್ಥಾನ, ಇಂಡೋನೇಶಿಯಾ, ಅಮೇರಿಕ, ಆಸ್ಟ್ರೇಲಿಯಾ.

ಕಳೆದ ಕೆಲವು ವರ್ಷಗಳಿಂದ ನಾನು ಹೇಳುತ್ತಿದ್ದೆ, ಚಂದ ನೀಡುವ ವ್ಯಕ್ತಿಗಳ ಸಂಖ್ಯೆಯಲ್ಲಿ ಹೆಚ್ಚಳ ಮಾಡಿರಿ ಎಂದು. ಹಾಗೆ ವಸೂಲಾಗುವ ಹಣದಲ್ಲಲ್ಲ, ಭಾಗವಹಿಸುವ ವ್ಯಕ್ತಿಗಳ

ಮತ್ತು ಜಮಾಅತ್‌ಗಳ ಸಂಖ್ಯೆಯಲ್ಲಿ ಹೆಚ್ಚಳಕ್ಕಾಗಿ ಗಮನ ಹರಿಸಿ ಟಾರ್ಗೆಟ್ ನೀಡಲಾಗಿತ್ತು. ಅಲ್ಲಾಹನ ಅನುಗ್ರಹದಿಂದ ಈ ವರ್ಷ 18 ಲಕ್ಷದ 27 ಸಾವಿರಕ್ಕಿಂತಲೂ ಹೆಚ್ಚು ಜನರು ಈ ಯೋಜನೆಯಲ್ಲಿ ಭಾಗವಹಿಸಿದರು. ಒಂದು ಲಕ್ಷದ 12 ಸಾವಿರ ವ್ಯಕ್ತಿಗಳು ಹೊಸದಾಗಿ ಸೇರಿರುವರು. ಭಾಗವಹಿಸುವವರ ಸಂಖ್ಯೆಯಲ್ಲಿ ಕಳೆದವರ್ಷಕ್ಕಿಂತ ವರ್ಧನೆ ಉಂಟುಮಾಡಿದ ದೇಶಗಳು: ಬಂಗ್ಲಾದೇಶ್, ಕೆನಡ, ಮಲೇಶಿಯಾ, ಭಾರತ, ಇಂಡೋನೇಶಿಯಾ, ಜರ್ಮನಿ, ಬ್ರಿಟನ್, ಅಮೆರಿಕ ಹಾಗೂ ಆಸ್ಟ್ರೇಲಿಯಾ ಆಗಿದೆ.

ಭಾರತದ ಪ್ರಮುಖವಾಗಿ ತ್ಯಾಗ ಮಾಡಿದ ಹತ್ತು ಜಮಾಅತ್‌ಗಳು ಅನುಕ್ರಮವಾಗಿ: ಕರುಳಾಯಿ, ಖಾದಿಯಾನ್, ಪತ್ತಪಿರಿಯಂ, ಹೈದರಾಬಾದ್, ಕೊಯಂಬತ್ತೂರ್, ಪಯಂಗಾಡಿ, ಬೆಂಗಳೂರು, ಕೋಝಿಕ್ಕೋಡ್, ಕೊಲ್ಕತ್ತ, ಯಾದ್‌ಗೀರ್.

ಹೆಚ್ಚು ತ್ಯಾಗ ಮಾಡಿದ ಹತ್ತು ರಾಜ್ಯಗಳು: ಪ್ರಥಮ ಸ್ಥಾನ ಕೇರಳ, ಕರ್ನಾಟಕ ಎರಡನೆಯ ಸ್ಥಾನ, ಅನಂತರ ಅನುಕ್ರಮವಾಗಿ ತಮಿಳುನಾಡು, ತೆಲಂಗಾಣ, ಜಮ್ಮುಕಾಶ್ಮೀರ, ಒಡಿಶ, ಪಂಜಾಬ್, ಬಂಗಾಳ, ದೆಹಲಿ ಹಾಗೂ ಉತ್ತರ ಪ್ರದೇಶ. ಕಾಶ್ಮೀರದ ಸ್ಥಿತಿ ಆರ್ಥಿಕವಾಗಿಯೂ ರಾಜಕೀಯವಾಗಿಯೂ ಬಹಳ ಕೆಟ್ಟು ಹೋಗಿದ್ದರೂ ಅಲ್ಲಿನ ಜಮಾಅತ್ ಸಹ ಬಹಳ ತ್ಯಾಗ ಮಾಡಿದೆ.

ಈ ಆರ್ಥಿಕ ಬಲಿದಾನ ನೀಡಿದ ಎಲ್ಲರ ಸಂಪತ್ತಿನಲ್ಲೂ ಸಂತಾನದಲ್ಲೂ ಅಲ್ಲಾಹನು ಅನುಗ್ರಹ ನೀಡಲಿ – ಆಮೀನ್.

——————————*****——————————

اَلْحَمْدُ لِلّٰہِ نَحْمَدُہٗ وَ نَسْتَعِیْنُہٗ وَ نَسْتَغْفِرُہٗ وَنُؤْمِنُ بِہٖ وَنَتَوَکَّلُ
عَلَیْہِ وَنَعُوْذُ بِاللّٰہِ مِنْ شُرُوْرِ اَنْفُسِنَا وَ مِنْ سَیِّئَاتِ اَعْمَالِنَا مَنْ
یَّھْدِہِ اللّٰہُ فَلَا مُضِلَّ لَہٗ وَمَنْ یُّضْلِلْہُ فَلَا ھَادِیَ لَہٗ - وَنَشْھَدُ اَنْ لَّا
اِلٰہَ اِلَّا اللّٰہُ وَ نَشْھَدُ اَنَّ مُحَمَّدًا عَبْدُہٗ وَرَسُوْلُہٗ- عِبَادَاللّٰہِ رَحِمَکُمُ
اللّٰہُ اِنَّ اللّٰہَ یَاْمُرُ بِالْعَدْلِ وَ الْاِحْسَانِ وَ اِیْتَاءِ ذِی الْقُرْبٰی وَیَنْھٰی
عَنِ الْفَحْشَاءِ وَ الْمُنْکَرِ وَ الْبَغْیِ یَعِظُکُمْ لَعَلَّکُمْ تَذَکَّرُوْنَ
اُذْکُرُوْا اللّٰہَ یَذْکُرْکُمْ وَ ادْعُوْہُ یَسْتَجِبْ لَکُمْ وَلَذِکْرُ اللّٰہِ اَکْبَرُ-

***Friday Sermon delivered by Hadrath Khaleefatul Masih Al Khamis*** *(atba)*

*At, Masjid Baithul Futhuh, London, U.K. On 08-11-2019*

**Summarized by** *Majlis Ansarullah Bharat*

***Kannada Translation**:* M. Ubeidullah for Kannada Desk, Qadian

***Reviewed by**:* M.P Ibrahim |***Typing**:* U Basheer Ahmad

***Published By**:* Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon